ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ1864/2019

ಚಾಸಾಃ1 ಪ್ರಾಸಾಃ1

ದಿನಾಂಕಃ 19.12.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಪ್ರಫುಲ್ಲ ಶೆಟ್ಟಿ |
| ಗಂಡನ ಹೆಸರು | : | ಅಶೋಕ ಕುಮಾರ ಶೆಟ್ಟಿ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 23-12-2018 ರಂದು ಆಸ್ತಿ ವಿಚಾರವಾಗಿ ಪಂಚಾಯಿತಿ ನಡೆಸಲು ನನ್ನ ತಾಯಿ ಮನೆಯಾದ ಬೇಳೂರಿನಲ್ಲಿ ನಮ್ಮ ಕುಟುಂಬಸ್ಥರು ಎಲ್ಲರೂ ಸೇರಿದ್ದು, ಅಲ್ಲಿ ನನ್ನ ಅಕ್ಕ ಭಾವರಾದ ಆರೋಪಿತರು ಸಹ ಇದ್ದರು. ನನ್ನೊಂದಿಗೆ ಚಾಸಾ-2 ರಿಂದ 4 ಇದ್ದರು. ಆಗ ನನ್ನ ತಮ್ಮ ಪ್ರಸನ್ನ ಆತನ ಹೆಂಡತಿ ಮಮತಾ ಶೆಟ್ಟಿ, ಮತ್ತೊಬ್ಬ ತಮ್ಮ ಪ್ರವೀಣ ಎಲ್ಲರೂ ನಮ್ಮ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಳ್ಳಲು ಮಾತನಾಡಿಕೊಂಡಿದ್ದಾಗ ಆ ವೇಳೆಗೆ ಆರೋಪಿತರು, ನನ್ನ ತಮ್ಮಂದಿರಾದ ಪ್ರವೀಣ ಮತ್ತು ಪ್ರಸನ್ನರವರು ಅದಕ್ಕೆ ಒಪ್ಪಿರುವುದಿಲ್ಲ.

ನನ್ನ ತಾಯಿ ಮನೆಯಿಂದ 50 ಅಡಿ ದೂರದಲ್ಲಿ ನನ್ನ ತಮ್ಮ ಪ್ರಸನ್ನ ಮನೆ ನಿರ್ಮಿಸಲು ಪಾಯ ತೆಗೆಯುತ್ತಿದ್ದು, ಕೆಲಸ ಮಾಡುತ್ತಿದ್ದ ಖಾರ್ವಿರವರಿಗೆ ನಿರ್ಮಾಣವನ್ನು ನಿಲ್ಲಿಸಿ ವಿಭಾಗ ಇತ್ಯಾರ್ಥ ಆದ ನಂತರ ಮುಂದುವರೆಸುವಂತೆ ಸೂಚಿಸಿರುತ್ತೇನೆ. ಅದಕ್ಕೆ ಖಾರ್ವಿರವರು ಒಂದು ಕಬ್ಬಿಣದ ರಾಡ್ ತೆಗೆದು ನನಗೆ ಹೊಡೆದಿರುತ್ತಾರೆ. ಆಗ ಪ್ರಸನ್ನ ಶೆಟ್ಟಿ ಅದನ್ನು ನೋಡಿ ಚಾಕು ತೆಗೆದುಕೊಂಡು ಬಂದಿರುತ್ತಾರೆ. ನಾನು ತಪ್ಪಿಸಿಕೊಳ್ಳಲು ಬಂದಾಗ ಚಾಕು ನನ್ನ ಎಡಕೈಗೆ ತಾಗಿ ರಕ್ತಗಾಯವಾಗಿರುತ್ತದೆ. ರಕ್ತ ಸ್ರಾವವು

ನಾನು ಧರಿಸಿದ್ದ ಬಟ್ಟೆಗೆ ತಾಗಿರುತ್ತದೆ. ಆರೋಪಿತರು ನನಗೆ ಆಸ್ತಿಯನ್ನು ನೀಡುವುದಿಲ್ಲ ಮುಂದೆ ಇಲ್ಲಿಗೆ ಬರಬಾರದು ಎಂದು ಹೇಳಿ 1ನೇ ಆರೋಪಿ ಕೈಗೆ ಬೆನ್ನಿಗೆ ಗುದ್ದಿ, 2ನೇ ಆರೋಪಿ ಜುಟ್ಟು ಹಿಡಿದು ಎಳೆದಾಡಿರುತ್ತಾರೆ. ಆ ವೇಳೆಗೆ ಪ್ರಸನ್ನರವರ ಹೆಂಡತಿ ನನ್ನನ್ನು ತಳ್ಳಾಡಿರುತ್ತಾರೆ. ಆ ವೇಳೆಗೆ ಚಾಸಾ-2 ಮತ್ತು 3ರವರು ನನ್ನನ್ನು ತಪ್ಪಿಸಲು ಬಂದಾದಾಗ ನನ್ನನ್ನು ಅವಾಚ್ಯವಾಗಿ ನಿಂದಿಸಿ ಆಸ್ತಿ ಕೊಡುವುದಿಲ್ಲ ಎಂದು ಹೇಳಿ ಜೀವ ಬೆದರಿಕೆ ಹಾಕಿರುತ್ತಾರೆ. ಅನಂತರ ಸ್ವಲ್ಪ ದೂರದಿಂದ ಚಾಸಾ-4 ಮತ್ತು 5ರವರು ಅಲ್ಲಿಗೆ ಬಂದರು.

ಅನಂತರ ಚಾಸಾ-2 ಮತ್ತು 3ರವರು ನನ್ನನ್ನು ಆಚಾರ್ಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತಾರೆ. ಅಲ್ಲಿಂದ ಕುಂದಾಪುರ ಸರಕಾರಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಸದ್ರಿ ಘಟನೆ ಮಧ್ಯಾಹ್ನ 3 ರಿಂದ 3-30ರ ವೇಳೆಗೆ ಅಂದಾಜಿಗೆ ನಡೆದಿರುತ್ತದೆ. ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ 24ನೇ ತಾರೀಕಿನಂದು ಪೊಲೀಸರು ವಿಚಾರಿಸಲು ಬಂದಾಗ ನಾನು ನೀಡಿದ ಹೇಳಿಕೆಯನ್ನು ಚಾಸಾ-2ರವರು ಬರವಣಿಗೆ ಮಾಡಿ ಪೊಲೀಸರಿಗೆ ಹಾಜರುಪಡಿಸಿರುತ್ತಾರೆ. ನಾನು ಆಸ್ಪತ್ರೆಯಲ್ಲಿ 3 ದಿನಗಳ ಕಾಲ ದಾಖಲಾಗಿದ್ದೆ.

ಈ ಘಟನೆಯಾಗಿ 1 ತಿಂಗಳ ನಂತರ ನಾನು ನನ್ನ ತಾಯಿ ಮನೆಗೆ ಹೋಗಿದ್ದಾಗ ದೂರು ದಾಖಲಿಸುವುದು ಮಾಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ಸಣ್ಣ ರಾಡ್, ಒಂದು ಹಸಿರು ಬಣ್ಣದ ಚೂಡಿದಾರ್ ಟಾಪ್, ವೇಲನ್ನು ಹಾಗೂ ಚಾಕುವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ1 ರಿಂದ 4 ಎಂದು ಗುರುತಿಸಲಾಯಿತು.

ಸ್ವಲ್ಪ ದಿನದ ನಂತರ ನ್ಯಾಯಾಲಯದ ಮುಂದೆ ಹಾಜರಾಗಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ದೂರು ಮತ್ತು ಕಲಂ 164ರ ಹೇಳಿಕೆಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-1 ಮತ್ತು 2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ)

ಎಂದು ಗುರುತಿಸಲಾಯಿತು. ನನಗೆ ಮೇಲೆ ಹೇಳಿದಂತೆ ಹಲ್ಲೆ ಮಾಡಿದವರ ಪೈಕಿ ಈ ದಿನ 1 ಮತ್ತು 2ನೇ ಆರೋಪಿತರು ಮಾತ್ರ ನ್ಯಾಯಾಲಯದ ಮುಂದೆ ಹಾಜರು ಇರುತ್ತಾರೆ.

**(ಈ ಹಂತದಲ್ಲಿ ಸ.ಸ.ಅರವರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲವಕಾಶ ಕೋರಿದ್ದು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**